**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.475/2014**

ಸಾಕ್ಷಿದಾರರ ಹೆಸರು : ಬಿ.ವಿ.ಪುರುಷೋತ್ತಮ್ ರಾಜ್ ಅರಸ್ ಪ್ರಾ.ಸಾ : 4
ತಂದೆಯ ಹೆಸರು : ಬಿ.ಕೆ.ವೆಂಕಟರಾಜು ಚಾಸಾ : 6
ವಯಸ್ಸು : 56 ವರ್ಷ
ಉದ್ಯೋಗ : ಕಾರ್ಯದರ್ಶಿ, ಕೆಳಗೂರು ಗ್ರಾಮ ಪಂಚಾಯಿತಿ
ವಾಸಸ್ಥಳ : ಬಿಳಗುಳ

**ದಿನಾಂಕ:23-08-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

ನಾನು 1994 ನೇ ಸಾಲಿನಿಂದ 2013 ರ ಫೆಬ್ರವರಿ ವರೆಗೆ ಹೆಸಗಲ್ ಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

ನಾನು ಹೆಸಗಲ್ ಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಕಾಲಕ್ಕೆ ಕೆ.ಗಣೇಶ್ ಎಂಬುವವರು ಕಾರ್ಯದರ್ಶಿಯಾಗಿ ಅಂದಾಜು 2012 ರವರೆಗೆ ಕಾರ್ಯ ನಿರ್ವಹಿಸುತ್ತಿದ್ದರು. ಸದರಿ ಕೆ.ಗಣೇಶ್ ರವರು 2012 ನೇ ಸಾಲಿನಲ್ಲಿ ಪಾವತಿಯಾಗಿರುತ್ತಾರೆ. ಆ ಕಾಲಕ್ಕೆ ನಾನು ಮತ್ತು ಕೆ.ಗಣೇಶ್ ರವರು ಮಾತ್ರ ಪಂಚಾಯಿತಿ ಕೆಲಸ ಮಾಡುತ್ತಿದ್ದ ಕಾರಣ ಹೆಚ್ಚಿನ ಕೆಲಸದ ಒತ್ತಡವಿತ್ತು ಆದ್ದರಿಂದ ನನ್ನ ಕೆಲಸ ಮುಗಿದ ನಂತರ ಕೆ.ಗಣೇಶ್ ರವರು ನನ್ನ ಕಡೆಗಳಿಂದ ಕೆಲವು ಪಂಚಾಯಿತಿ ದಾಖಲೆಗಳಲ್ಲಿ ಬರವಣಿಗೆ ಮಾಡಿಸುತ್ತಿದ್ದರು. ಈಗ ನಿಪಿ-8 ರಲ್ಲಿ ಕಂಡು ಬರುವ ಬರವಣಿಗೆ ನನ್ನ ಹಸ್ತಾಕ್ಷರದಿಂದ ಕೂಡಿರುತ್ತದೆ. ಸದರಿ ಬರವಣಿಗೆಗಳನ್ನು ನಾನು ಕೆ.ಗಣೇಶ್ ರವರ ಮೌಖಿಕ ಆದೇಶದ ಮೇರೆಗೆ ಬರೆಯುತ್ತಿದ್ದೆ ಯಾವುದೇ ದಾಖಲೆಗಳನ್ನು ಪರಿಶೀಲಿಸುತ್ತಿರಲಿಲ್ಲ, ದಾಖಲೆಗಳನ್ನು ಆತನೇ ನೋಡುತ್ತಿದ್ದ. ನಿಪಿ-8 ರ ಪ್ರಕಾರ ಸ.ನಂ.16 ರ ನಿವೇಶನಕ್ಕೆ ಸಂಬಂಧಿಸಿದಂತೆ ಕುಮಾರರಾಜು ರವರ ಹೆಸರಿಗೆ ಖಾತೆ ಮಾಡಲಾಗಿರುತ್ತದೆ.

ನಿಪಿ-8 ರಲ್ಲಿ ಕಂಡುಬರುವ ಕಾರ್ಯದರ್ಶಿಗಳ ಸಹಿ ಕೆ.ಗಣೇಶ್ ರವರ ಸಹಿಯಾಗಿರುತ್ತದೆ. ಸದರಿ ಸಹಿ ಕೆ.ಗಣೇಶ್ ರವರ ಸಹಿಯೆಂದು ನಾನು ಅವರೊಂದಿಗೆ ಸಾಕಷ್ಟು ವರ್ಷಗಳ ಕಾಲ ಕೆಲಸ ನಿರ್ವಹಿಸುತ್ತಿದ್ದ ವೇಳೆ ನೋಡಿರುವ ಕಾರಣ ಗುರುತಿಸುತ್ತಿದ್ದೇನೆ. ಸದರಿ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ ಕೆ.ಸಿ.ಸಿ. ವಕೀಲರು ಶ್ರೀ ಕೆ.ಎಸ್.ಎ. ವಕೀಲರ ಪರವಾಗಿ ಸಮಯಕೋರಿದ್ದು ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.475/2014**

| | | |
|---|---|---|
| ಸಾಕ್ಷಿದಾರರ ಹೆಸರು | : ಸಮಿವುಲ್ಲಾ ಶರೀಫ್ ಸಿ.ಝುಡ್. | ಪ್ರಾ.ಸಾ : 3 |
| ತಂದೆಯ ಹೆಸರು | : ಜಫ್ರುಲ್ಲಾ ಶರೀಫ್ | ಚಾಸಾ : 7 |
| ವಯಸ್ಸು | : 41 ವರ್ಷ | |
| ಉದ್ಯೋಗ | : ಪಂಚಾಯಿತಿ ಅಭಿವೃದ್ಧಿ, ಬಿ.ಹೊಸಳ್ಳಿ ಪಂಚಾಯಿತಿ | |
| ವಾಸಸ್ಥಳ | : ಬಿಳಗುಳ | |

**ದಿನಾಂಕ:23-08-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

ದಿನಾಂಕ: 25-08-2012 ರಿಂದ 29-09-2016 ರವರೆಗೆ ಹೆಸಗಲ್ ಗ್ರಾಮ ಪಂಚಾಯಿತಿಯಲ್ಲಿ ಪಿ.ಡಿ.ಓ. ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿನಾಂಕ:27-04-2014 ರಂದು ಮೂಡಿಗೆರೆ ಪೊಲೀಸ್ ಠಾಣೆಯಿಂದ ಕುಮಾರರಾಜು ಬಿನ್ ಗೋಪಾಲರಾಜು, ವಾಸ: ಬಿಳಗುಳ, ಮೂಡಿಗೆರೆ ತಾಲ್ಲೂಕು ರವರಿಗೆ ನ್ನು ನಿಪಿ-6(ಎ), ನಾನು ದಿ:07-05-2014 ರಂಸಂಬಂಧಿಸಿದ ಬಿಳಗುಳ ಗ್ರಾಮದ ಸ.ನಂ.16 ರ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡುವಂತೆ ಕೋರಿಕೊಂಡಿದ್ದು, ಸದರಿ ಪತ್ರವನ್ನು ನಾನು ದಿ:05-05-2014 ರಂದು ಪಡೆದುಕೊಂಡು ಸದರಿಯವರ ಕೋರಿಕೆ ಮೇರೆಗೆ ನಾನು ದಿನಾಂಕ:07-05-2014 ರಂದು ಸದರಿ ಕುಮರರಾಜು ಬಿನ್ ಗೋಪಾಲರಾಜು ರವರ ಹೆಸರಿಗೆ ಗ್ರಾಮ ಪಂಚಾಯಿತಿ ಖಾತೆ ಸಂ.296(Assessment No.296) ಖಾತೆ ಸಂಖ್ಯೆಯು 15/2000-01, ದಿ:15-06-2001 ರಂತೆ ದಾಖಲಾಗಿರುತ್ತದೆ. ಸದರಿ ಖಾತೆಯನ್ನು ಅಂದಿನ ಕಾರ್ಯದರ್ಶಿ ದಿವಂಗತ ಗಣೇಶ್ ರವರು ಹಕ್ಕು ಪತ್ರದ ಆಧಾರದ ಮೇಲೆ ಮಾಡಿದ್ದು, ಆ ಸಂಬಂಧ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲವೆಂಬ ಮಾಹಿತಿಯನ್ನೊಳಗೊಂಡ ನಮ್ಮ ಕಛೇರಿ ಪತ್ರ ಸಂ.12/2014-15 ರಂತೆ ನೀಡಿರುತ್ತೇನೆ. ಅದರೊಂದಿಗೆ ಮ್ಯುಟೇಷನ್ ವಹಿ 15/2000-01 ರ ದೃಢಿಕೃತ ದಾಖಲಾತಿಯನ್ನು ಮತ್ತು ಅಸೆಸ್‌ಮೆಂಟ್ ರಿಜಿಸ್ಟರ್ ಪ್ರತಿಯನ್ನು ಸಹ ಲಗತ್ತಿಸಿ ಕಳುಹಿಸಿಕೊಟ್ಟಿರುತ್ತೇನೆ.

ದಿ:13-01-2014 ರಂದು ಮೂಡಿಗೆರೆ ಪೊಲೀಸ್ ಠಾಣೆಯಿಂದ ಬಿಳಗುಳ ಗ್ರಾಮದ ಸ.ನಂ.16 ರಲ್ಲಿ ನಿವೇಶನದ ಹಕ್ಕು ಪತ್ರ ಸಂ.151/1982-93 ಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನೀಡುವಂತೆ ಕೋರಿಕೊಂಡಿರುತ್ತಾರೆ. ಸದರಿ ಪತ್ರವನ್ನು ನಾನು ದಿನಾಂಕ:13-01-2014 ರಂದು ಸ್ವೀಕರಿಸಿ ದಿನಾಂಕ:01-02-2014 ರಂದು ನಮ್ಮ ಕಛೇರಿ ಪತ್ರ ಸಂ.37/2013-14 ರಂತೆ ಮಾಹಿತಿಯನ್ನು ಮತ್ತು ಅದರೊಂದಿಗೆ ಹಕ್ಕು ಪತ್ರದ ದೃಢಿಕೃತ ನಕಲು, ಸ.ನಂ.16 ರ ರೆವಿನ್ಯೂ ಸ್ಕೆಚ್ ನ ದೃಢಿಕೃತ ನಕಲು, ಖಾತೆ ಕ್ರಮ ಸಂ.15/2000-01 ರ ದೃಢಿಕೃತ ನಕಲು, ಕಂದಾಯ ಪಾವತಿ ರಶೀದಿಯ ದೃಢಿಕೃತ ನಕಲು, 2013-14 ನೇ ಸಾಲಿನ ಅಸೆಸ್ ಮೆಂಟ್ ರಿಜಿಸ್ಟರಿನ ದೃಢಿಕೃತ ಪ್ರತಿ, ಬೇಡಿಕೆ ಪುಸ್ತಕ ದೃಢಿಕೃತ ಪ್ರತಿ, ದಿ:10-05-2010 ರ ಕಟ್ಟಡ ಪರವಾನಗಿಯ ದೃಢಿಕೃತ ಪ್ರತಿ, ಗ್ರಾಮ ಪಂಚಾಯಿತಿ ಠರಾವಿನ ದೃಢಿಕೃತ ಪ್ರತಿ ಹಾಗೂ ದಿ:05-09-2012 ರ ಗ್ರಾಮ ಪಂಚಾಯಿತಿ ಠರಾವಿನ ದೃಢಿಕೃತ ಪ್ರತಿಗಳನ್ನು ನೀಡಿರುತ್ತೇನೆ.

ನಾನು ದಿನಾಂಕಃ27-04-2014 ರಂದು ಮೂಡಿಗೆರೆ ಪೊಲೀಸ್ ಠಾಣೆಯಿಂದ ಪಡೆದುಕೊಂಡ ಪತ್ರವನ್ನು ನಿಪಿ-6, ಸಾಕ್ಷಿ ಸಹಿಯನ್ನು ನಿಪಿ-6(ಎ), ನಾನು ದಿಃ07-05-2014 ರಂದು ಪೊಲೀಸರಿಗೆ ನೀಡಿದ ಮಾಹಿತಿ ಪತ್ರವನ್ನುಈಗ ನೋಡುತ್ತಿದ್ದು ಅದನ್ನು ನಿಪಿ-7, ಸಾಕ್ಷಿ ಸಹಿಯನ್ನು ನಿಪಿ-7(ಎ), ನಿಪಿ-7 ರಲ್ಲಿರುವ ಮಾಹಿತಿಗಳನ್ನು ನಾನು ನಮ್ಮ ಕಛೇರಿಯಲ್ಲಿ ನಿರ್ವಹಿಸಲಾದ ಖಾತಾ ಪುಸ್ತಕ (ಮ್ಯುಟೇಷನ್) ಹಾಗೂ ಬೇಡಿಕೆ ವಹಿ ರಿಜಿಸ್ಟರ್ ಗಳನ್ನು ಪರೀಶಿಲಿಸಿ ನೀಡಿರುತ್ತೇನೆ. ನಾನು ಸದರಿ ನಿಪಿ-7 ರೊಂದಿಗೆ ಲಗತ್ತಿಸಿದ ಎಂ.ಆರ್.15/2000-01 ರ ದೃಢಿಕೃತ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-8, ಸಾಕ್ಷಿ ಸಹಿಯನ್ನು ನಿಪಿ-8(ಎ) ಮತ್ತು ನಿಪಿ-8(ಬಿ), ನಾನು ದಿನಾಂಕಃ13-01-2014 ರಂದು ಮೂಡಿಗೆರೆ ಪೊಲೀಸ್ ಠಾಣೆಯಿಂದ ಪಡೆದುಕೊಂಡ ಪತ್ರವನ್ನು ನಿಪಿ-9, ಸದರಿ ಪತ್ರಕ್ಕೆ ದಿನಾಂಕಃ01-02-2014 ರಂದು ನಮ್ಮ ಕಛೇರಿ ಪತ್ರ ಸಂ.37/2013-14 ರಂತೆ ನೀಡಿದ ಮಾಹಿತಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-10, ಸಾಕ್ಷಿ ಸಹಿಯನ್ನು ನಿಪಿ-10(ಎ), ನಿಪಿ-11 ರೊಂದಿಗೆ ನೀಡಿದ ಹಕ್ಕು ಪತ್ರದ ದೃಢಿಕೃತ ನಕಲು, ಸ.ನಂ.16 ರ ರೆವಿನ್ಯೂ ಸ್ಕೆಚ್ ನ ದೃಢಿಕೃತ ನಕಲು, ಖಾತೆ ಕ್ರಮ ಸಂ.15/2000-01 ರ ದೃಢಿಕೃತ ನಕಲು, ಕಂದಾಯ ಪಾವತಿ ರಶೀದಿಯ ದೃಢಿಕೃತ ನಕಲು, 2013-14 ನೇ ಸಾಲಿನ ಅಸೆಸ್ ಮೆಂಟ್ ರಿಜಿಸ್ಟರಿನ ದೃಢಿಕೃತ ಪ್ರತಿ, ಬೇಡಿಕೆ ಪುಸ್ತಕ ದೃಢಿಕೃತ ಪ್ರತಿ, ದಿಃ10-05-2010 ರ ಕಟ್ಟಡ ಪರವಾನಗಿಯ ದೃಢಿಕೃತ ಪ್ರತಿ, ಗ್ರಾಮ ಪಂಚಾಯಿತಿ ಠರಾವಿನ ದೃಢಿಕೃತ ಪ್ರತಿ ಹಾಗೂ ದಿಃ05-09-2012 ರ ಗ್ರಾಮ ಪಂಚಾಯಿತಿ ಠರಾವಿನ ದೃಢಿಕೃತ ಪ್ರತಿಗಳನ್ನುಕ್ರಮವಾಗಿ ನಿಪಿ-11 ರಿಂದ 19 ಹಾಗೂ ಸಾಕ್ಷಿ ಸಹಿಯನ್ನು ನಿಪಿ-11(ಎ) ರಿಂದ 19(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ ಕೆ.ಸಿ.ಸಿ. ವಕೀಲರು ಶ್ರೀ ಕೆ.ಎಸ್.ಎ. ವಕೀಲರ ಪರವಾಗಿ ಸಮಯಕೋರಿದ್ದು ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ